ರಾಜ್ಯದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ

1770 (2416) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಲಾಗುತ್ತಿದೆಯೇ;

(ಆ) ಹಾಗಿದ್ದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಲು ಕೋರಿ ಎಷ್ಟು ಮನವಿಗಳು ಸರ್ಕಾರಕ್ಕೆ ಬಂದಿವೆ (ಜಿಲ್ಲಾವಾರು ವಿವರ ನೀಡುವುದು);

(ಇ) ಈವರೆವಿಗೆ ಎಷ್ಟು ಜನರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿ ಹುದ್ದೆ ನೀಡಲಾಗಿದೆ (ಇಲಾಖಾವಾರು ಮಾಹಿತಿ ನೀಡುವುದು)?

ಶ್ರೀ ಎಸ್. ಎಮ್. ಕೃಷ್ಣ (ಮುಖ್ಯಮಂತ್ರಿ)

(ಅ) ಹೌದು.

(ಆ) 2815 ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

(ಇ) 1595 (ಇಲಾಖಾವಾರು ಮಾಹಿತಿಯು ಕೇಂದ್ರೀಕೃತವಾಗಿ ಕೂಡಲೇ ಲಭ್ಯವಿರುವುದಿಲ್ಲ)

ಅನುಬಂಧ

ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ವಿವಿಧ ಇಲಾಖೆಗಳಿಂದ ವಿಭಾಗಾಧಿಕಾರಿಗಳ ಕಛೇರಿಗಳಿಗೆ ಬಂದಿರುವ ಪ್ರಸ್ತಾವನೆಗಳ ಜಿಲ್ಲಾವಾರು ಪಟ್ಟಿ.

ಕ್ರ. ಸಂ.	ವಿಭಾಗ	ಜಿಲ್ಲೆ	ಪ್ರಸ್ತಾವನೆಗಳ ಸಂಖ್ಯೆ
1	2	3	4
1.	ಬೆಂಗಳೂರು	ಬೆಂಗಳೂರು (ನಗರ)	398
		ಬೆಂಗಳೂರು (ಗ್ರಾಮಾಂತರ)	120
		ತುಮಕೂರು	200
		ದಾವಣಗೆರೆ	108
		ಕೋಲಾರ	147
		ಚಿತ್ರದುರ್ಗ	134
		ಶಿವಮೊಗ್ಗ	81
		ಒಟ್ಟು	1188

1	2	3		4
2.ಮೈಸೂರು		ಮೈಸೂರು		280
		ಮಂಡ್ಯ		150
		ಚಾಮರಾಜನಗರ		22
		ಕೊಡಗು		42
		ಚಿಕ್ಕಮಗಳೂರು		49
		ದಕ್ಷಿಣ ಕನ್ನಡ		53
		ಹಾಸನ		86
		ಉಡುಪಿ		16
			ಒಟ್ಟು	698
3.	ಬೆಳಗಾಂ	ಬೆಳಗಾಂ		40
	(ಕಂದಾಯ ಇಲಾಖೆ	ವಿಜಾಪುರ		54
	ಮಾತ್ರ)	ಬಾಗಲಕೋಟೆ		73
		ಧಾರವಾಡ		8
		ಗದಗ		52
		ಹಾವೇರಿ		62
		ಕಾರವಾರ		22
			ಒಟ್ಟು	311
4.	ಗುಲ್ಬರ್ಗ	ಬೀದರ್		103
		ಬಳ್ಳಾರಿ		129
		ರಾಯಚೂರು		109
		ಕೊಪ್ಪಳ		58
		ಗುಲ್ಬರ್ಗಾ		219
			ಒಟ್ಟು	618

ರಾಜ್ಯದಲ್ಲಿ ವಿಮಾನ ನಿಲ್ದಾಣಗಳ ನಿರ್ಮಾಣ

1773 (2574) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. :

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಮೂಲಭೂತ ಸೌಕರ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಇಲಾಖೆಯ ಮುಂದಿನ ಕಾರ್ಯ ಯೋಜನೆಗಳು ಯಾವುವು; ವಿವರಗಳನ್ನು ನೀಡುವುದು;